* * *

'ಇವತ್ತು ರಜೆ ಹಾಕು. ನಿನ್ನ ಜತೆ ಮಾತಾಡೋದಿದೆ. ಮೈಸೂರು ರೋಡಲ್ಲಿ ಒಂದು ಲಾಂಗ್ ಡ್ರೈವ್ ಹೋಗಿ ಬರೋಣ' ಎಂದು ಏಳೂವರೆ ಹೊತ್ತಲ್ಲಿ ಅರುಂಧತಿ ವಾಟ್ಸಪ್ ಮೆಸೇಜ್ ಕಳಿಸಿದಳು.

'ಓಕೆ, ಇವತ್ತು ನಂಗೆ ವೀಕ್ಲಿಆಫ್. ನಾನೂ ನಿಂಗೊಂದು ವಿಷಯ ಹೇಳಬೇಕು. ಹತ್ತು ಗಂಟೆಗೆ ಮಲೇಷಿಯಾ ಎಂಬೆಸಿ ಪಕ್ಕದಲ್ಲಿರೋ ರೆಸ್ಟೊರೆಂಟಿಗೆ ಬಾ. ಅಲ್ಲಿ ಬ್ರೇಕ್ ಫಾಸ್ಟ್ ಮುಗಿಸಿ ಶ್ರೀರಂಗಪಟ್ಟಣದ ತನಕ ನನ್ನ ಕಾರಲ್ಲೇ ಹೋಗಿ ಬರೋಣ...' ಎಂದು ಉತ್ತರಿಸಿದ.

ಚನ್ನಪಟ್ಟಣ ದಾಟುವವರೆಗೆ ಇಬ್ಬರೂ ಮಾತೇ ಆಡಲಿಲ್ಲ. ಅದೇನೋ ಹೇಳಬೇಕು ಅಂತಿದ್ದೆಯಲ್ಲ ಹೇಳು ಅನ್ನೋ ಭಾವದಲ್ಲೇ ಇಬ್ಬರೂ ಸುಮ್ಮನಿದ್ದರು.

ಅಭಿ ಇವತ್ತು ಬೆಳಿಗ್ಗೆ ಬಂದ. ನನ್ನ ಜತೆ ಮಾತಾಡೋಕೆ ಟ್ರೈ ಮಾಡಿದ. ನಾನು ರೆಸ್ಪಾನ್ಸ್ ಮಾಡಲಿಲ್ಲ. 'ನಂಗೆ ಮುಂಬೈನ ಹೆಡ್ಡಾಫೀಸಿಗೆ ಟ್ರಾನ್ಸ್‌ಫರ್ ಆಗಿದೆ. ಏನು ಮಾಡೋದು ಅಂತ ಗೊತ್ತಾಗ್ತ ಇಲ್ಲ. ಹೋಗಲೋ, ಬೇಡವೋ ಎಂದು ಕೇಳಿದ. ತ್ರಿವೇಂಡ್ರಂ ಪೋಸ್ಟಿಂಗ್ ಕೊಟ್ಟರೆ ಹೋಗ್ತೀನಿ ಅಂತ ಕೇಳಿ ಲೆಟರ್ ಕೊಟ್ಟು ಬಂದಿದ್ದೀನಿ ಅಂದ. ಎಲ್ಲಿಗಾದರೂ ಹೋಗಿ ಸಾಯಿ ಅನ್ನೋ ಹಾಗೆ ನಾನು ಸುಮ್ಮನಿದ್ದೆ...' ಎನ್ನುತ್ತ ಅರುಂಧತಿ ಮೌನ ಮುರಿದಳು.

'ಅಭಿ ಜತೆ ಇರೋಕಾಗಲ್ಲ. ಅವನಿಗೆ ಡೈವೋರ್ಸ್ ಕೊಡೋದು ಅಂತ ಡಿಸೈಡ್ ಮಾಡಿದ್ದೀನಿ...' ಎಂದಳು. ಅವಳ ಮಾತು ಕೇಳಿ ಸಿದ್ಧಾರ್ಥನಿಗೆ ಆಶ್ಚರ್ಯವಾಯಿತು. ಆದರೆ ಏನೂ ಹೇಳಲಿಲ್ಲ.

'ಇದು ಅವಸರದಲ್ಲಿ ತೆಗೆದುಕೊಂಡ ಡಿಸಿಷನ್ ಅಲ್ಲ. ತುಂಬಾ ಯೋಚನೆ ಮಾಡಿದ್ದೀನಿ...' ಎನ್ನುತ್ತ ಸಿದ್ಧಾರ್ಥನ ಮುಖ ನೋಡಿದಳು.

'ಅಭಿ ಕೊಳಕ, ಸೆಕ್ಸ್ ಅಡಿಕ್ಟ್. ಸುದೇಷ್ಣ ಒಬ್ಬಳೇ ಅಲ್ಲ. ಇನ್ನೂ ಒಬ್ಬಿಬ್ಬರ ಜತೆ ಅವನಿಗೆ ಫಿಸಿಕಲ್ ರಿಲೇಷನ್ ಇರೋದು ನಂಗೆ ಗೊತ್ತಾಗಿದೆ. ಅವನ ಬ್ಯಾಂಕಿನಲ್ಲೇ ಕೆಲಸ ಮಾಡುವ ಒಬ್ಬಳ ಪರಿಚಯ ನಂಗಿದೆ. ಅಲ್ಲೇ ಕೆಲಸ ಮಾಡೋ ಮೆನೆಜಿಸ್ ಅನ್ನೋ ಹೆಂಗಸಿನ ಜತೆ ಅಭಿಗೆ ಸಲುಗೆ ಇದೆ ಅಂತ ಅವಳು ಹೇಳಿದಳು.

ಕಳೆದ ತಿಂಗಳು ಅಭಿ ಮೂರು ದಿನ ಬೆಳಿಗ್ಗೆ ಇಲ್ಲಿಂದ ಪಣಜಿಗೆ ಹೋಗಿ ಸಂಜೆ ವಾಪಸ್ ಬಂದಿದ್ದಾನೆ!... ಆ ಮೂರೂ ದಿನ ಮೆನೆಜಿಸ್ ರಜೆ ಹಾಕಿದ್ದಳಂತೆ! ಪಣಜಿಗೆ ಹೋಗಿ ಬಂದರೂ ಅಭಿ ನಂಗೇನೂ ಹೇಳಿಲ್ಲ. ಒಬ್ಬ ಪ್ರೈವೇಟ್ ಡಿಟೆಕ್ಟಿವ್‌ನ ಹೆಲ್ಪ್ ತಗಂಡು ಅವನ ಜಾಡು ಪತ್ತೆ ಮಾಡಿದೆ. ನಿನ್ನೆ ಸಂಜೆ ಅವನು ಕೆಲವು ಇನ್ಫರ್ಮೇಷನ್ಸ್ ಮತ್ತು ಡಾಕ್ಯುಮೆಂಟ್ಸ್‌ಗಳನ್ನು ಮೇಲ್ ಮಾಡಿದ್ದ. ಅವನ್ನೆಲ್ಲ ನೋಡಿದ ಮೇಲೆ ನಂಗೆ ಶಾಕ್ ಆಯ್ತು. ಒಂದು ಸಲ ಸುದೇಷ್ಣ ಅವನ ಜತೆ ಪಣಜಿಗೆ ಹೋಗಿ ಬಂದಿದ್ದಾಳೆ. ಉಳಿದೆರಡು ಸಲ ಮೆನೆಜಿಸ್ ಹೋಗಿದ್ದಾಳೆ. ಅವರು ಹೋಗಿ ಬಂದ ಫ್ಲೈಟುಗಳ ಟೈಮು, ಡೇಟು, ಸೀಟ್ ನಂಬರ್, ಏರ್‌ಪೋರ್ಟಿನಿಂದ ಹೋಟೆಲಿಗೆ ಹೋದ ಟ್ಯಾಕ್ಸಿಗಳ ನಂಬರು ಮತ್ತು ಸಂಜೆ ವಾಪಸ್ ಬಂದ ಫ್ಲೈಟ್‌ಗಳ ಡೀಟೈಲ್‌ಗಳನ್ನು ನೋಡಿದ ಮೇಲೆ ಅಭಿ ನಂಗೆ ಮೋಸ ಮಾಡ್ತಿದ್ದಾನೆ ಅನ್ನೋದು ಕನ್ಫರ್ಮ್ ಆಯ್ತು. ಅವನ ಜತೆ ಇರೋಕೆ ಅಸಹ್ಯ ಅನ್ನಿಸ್ತಿದೆ!.

ಇದನ್ನೆಲ್ಲ ತಿಳಕೊಳ್ಳೋಕೆ ಟ್ರೈ ಮಾಡದೆ ನನ್ನ ಗಂಡ ಶ್ರೀರಾಮಚಂದ್ರ ಅಂತ ಅಂದುಕೊಂಡು ಸುಮ್ಮನೆ ಇದ್ದು ಬಿಡಬಹುದಿತ್ತು. ಎಲ್ಲಾ ಗೊತ್ತಾದ ಮೇಲೆ ಅವನ ಜತೆ ಜಗಳ ಆಡ್ತಾ ಒಂದೇ ಮನೆಯಲ್ಲಿ ಇರೋ ಬದಲು ಡೈವೋರ್ಸ್ ತಗಂಡು ಬೇರೆಯಾದರೆ ಇಬ್ಬರಿಗೂ ನೆಮ್ಮದಿ ಅನ್ನಿಸ್ತಿದೆ. ಇಂಥ ವಿಷಯಗಳನ್ನು ಮೊದಲು ಅಮ್ಮನಿಗೆ ಹೇಳಬೇಕು. ಆದರೆ ಅವರಿಗೆ ಹೇಳಿ ಪ್ರಯೋಜನ ಇಲ್ಲ ಅನ್ನಿಸಿ ನಿಂಗೆ ಹೇಳ್ತಿದ್ದೀನಿ. ನೀನು ಏನು ಹೇಳ್ತೀಯಾ' ಎನ್ನುತ್ತ ಸಿದ್ಧಾರ್ಥನ ಮುಖ ನೋಡಿದಳು. ಅವನು ರಸ್ತೆ ನೋಡ್ತ ಕಾರು ಓಡಿಸ್ತಿದ್ದ. ಅವನು ಏನೂ ಹೇಳಲಿಲ್ಲ. ಅರ್ಧ ಗಂಟೆ ಇಬ್ಬರೂ ಮಾತೇ ಆಡದೆ ಸುಮ್ಮನಿದ್ದರು. 'ನೀನಿನ್ನೂ ಮದುವೆಯಾಗಿಲ್ಲ ಯಾಕೆ ಅಂತ ಒಂದ್ಸಲ ನನ್ನ ಕೇಳಿದ್ದೆ ನೆನಪಿದೆಯಾ...' ಎನ್ನುತ್ತ ಸಿದ್ಧಾರ್ಥ ಅವಳ ಕಡೆಗೆ ನೋಡಿದ.

'ನಂಗೆ ಮದುವೆ ಆಗಿದೆ ಅಂದ್ರೆ ನೀನು ನಂಬ್ತೀಯಾ? ನಾಲ್ಕು ವರ್ಷಗಳ ಹಿಂದೆ ನನ್ನ ಅಕ್ಕನ ಮಗಳ ಜತೆ ನನ್ನ ಮದುವೆ ಆಯ್ತು. ನನ್ನದು ವಿಚಿತ್ರ ಮದುವೆ. ಒಂದೇ ಒಂದು ದಿನವೂ ನಾನು ಅವಳ ಜತೆ ಕಳೆದಿಲ್ಲ! ಅವಳನ್ನು ಮದುವೆ ಆಗೋಕೆ ನಂಗೆ ಇಷ್ಟ ಇರಲಿಲ್ಲ.